ಹಾಕಿ ಯಾವುದೋ ಒಂದು ವುಡ್‌ನ್ನು ತೆಗೆದುಕೊಂಡು ಬಂದು ಇಡತಕ್ಕಂಥ ಸಾಧ್ಯತೆಗಳು ಬರಬಹುದು. ಆದ್ದರಿಂದ ಅವುಗಳ ಫೋಟೋ ತೆಗೆಸಿ ಆಲ್ಬಂಬ್ ನಲ್ಲಿ ಇಟ್ಟರೆ ಬಹಳ ಒಳ್ಳೆಯದೇನೋ ಎಂದು. ಕೇಸ್ ಸ್ವಲ್ಪ ಆಗ ಇಂಪ್ರೂವ್ ಆಗಬಹುದು ನನ್ನ ಪ್ರಕಾರ ಹೇಳುತ್ತಿದ್ದೇನೆ. ತಾವು ಕೊಟ್ಟಂಥ ಸಲಹೆ ಒಳ್ಳೆಯದು. ತಾವು ಹೇಳಿದ್ದು ತಪ್ಪು ಎಂದು ನಾನು ಹೇಳುವುದಿಲ್ಲ.

PROF. M.D.NANJUNDA SWAMY : My suggestion is always open to positive amendments. ತಾವು ಏನು ಬೇಕಾದರೂ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ : ಪ್ರೊ. ನಂಜುಂಡ ಸ್ವಾಮಿಯವರಿಗೆ ನಾನು ಹೇಳುವುದು ಏನೆಂದರೆ ಇದನ್ನು ಇನ್ನೂ ಸ್ವಲ್ಪ ಇಂಪ್ರೂವ್ ಮಾಡಿಬಿಟ್ಟರೆ ಒಳ್ಳೆಯದು. ಇನ್ನೂ ಅಂತಹ ಸಲಹೆ ಬಂದರೆ ಬಹಳ ಒಳ್ಳೆಯದು. ಅದನ್ನು ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡುತ್ತದೆ. ಇದು ಕ್ರಮ ತೆಗೆದುಕೊಳ್ಳಲು ಸೂಕ್ತ ಸಲಹೆ ಆಗಿದೆ. ಏಕೆಂದರೆ ಒಳ್ಳೊಳ್ಳೆಯ ಜಾಗದಲ್ಲಿ ಒಳ್ಳೊಳ್ಳೆಯ ಪೀಸಸ್‌ಗಳು ಇದ್ದಾವೆ. ಸರ್ಕಾರದ್ದವೂ ಕೂಡ ಇದ್ದಾವೆ. ಅದು ಹಾಳಾಗಬಾರದು ಎನ್ನತಕ್ಕ ದೃಷ್ಟಿಯಿಂದ ಹೇಳಿದ್ದೀರಿ. ಅದಕ್ಕೆ ತಮಗೂ ಅಭಿನಂದನೆಗಳು.

ನಿಯಮ 334ರ ಮೇರೆಗೆ

1. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಯ ಬಗ್ಗೆ.

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಕಾರ್ಖಾನೆಯು ಕಳೆದ ಹಲವಾರು ವರ್ಷಗಳಿಂದ ನಷ್ಟವನ್ನು ಅನುಭವಿಸುತ್ತಿರುವುದಕ್ಕೆ ಕಾರಣ ಕಾರ್ಖಾನೆಯಿಂದಲೇ ನೇರವಾಗಿ ಮಾರಾಟ ಮಾಡುತ್ತಿರುವುದು ಮತ್ತು ಸೋಪಿನ ತಯಾರಿಕೆಗೆ ಬೇಕಾದ ಕಚ್ಚಾವಸ್ತುಗಳಿಲ್ಲದೆ ನಿಗಧಿತ ಮಟ್ಟದಲ್ಲಿ ಉತ್ಪಾದನೆ ಆಗದೇ ಇರುವುದು. ಹಿಂದೆ ಇದ್ದ ವ್ಯವಸ್ಥೆಯ ಪ್ರಕಾರ ಎಂಎಸ್‌ಐಎಲ್ ಸಂಸ್ಥೆಯ ಮೂಬಕ ಈ ಕಾರ್ಖಾನೆಯ ಉತ್ಪಾದನೆಯನ್ನು ಮಾರಾಟ ಮಾಡಿದರೆ ಶೇಕಡ 3ರಷ್ಟು ನಷ್ಟ ಉಳಿಯುತ್ತದೆ. ಮತ್ತು ಕಚ್ಚಾ ವಸ್ತುಗಳನ್ನು ಕೂಡ ಕೊಂಡುಕೊಳ್ಳಲು ಹಣವನ್ನು ಒದಗಿಸದಿದ್ದರೆ ಈ ಕಾರ್ಖಾನೆಯು ಸುವ್ಯವಸ್ಥಿತ ರೀತಿಯಲ್ಲಿ ನಡೆಯಲು ಕಷ್ಟವಾಗುತ್ತದೆ. ಇದರಿಂದ ಇಲ್ಲಿ ಕೆಲಸ ಮಾಡತಕ್ಕ ಕಾರ್ಮಿಕ ಕುಟುಂಬಗಳು ಮುಂದೆ ತೊಂದರೆಯನ್ನು ಅನುಭವಿಸಬೇಕಾಗುತ್ತದೆ.

ಆದ್ದರಿಂದ, ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹಿಂದೆ ಇದ್ದಂಥ ರೀತಿಯಲ್ಲೇ ಈ ಕಾರ್ಖಾನೆಯ ಉತ್ಪಾದನೆಯನ್ನು ಮಾರಾಟ ಮಾಡಲು ಎಂಎಸ್‌ಐಎಲ್‌ಗೆ ವಹಿಸಿಕೊಟ್ಟು ಈ ಕಾರ್ಖಾನೆ ವ್ಯವಸ್ಥಿತಿವಾಗಿ ನಡೆದುಕೊಂಡು ಹೋಗಲು ಮತ್ತು ಕಳವಳಕ್ಕೊಳಗಾಗಿರುವ ಇಲ್ಲಿಯ ಕಾರ್ಮಿಕರ ಹಿತದೃಷ್ಟಿಯನ್ನು ಕಾಪಾಡುವಂತೆ ಕಾರ್ಖಾನೆಯ ಆಡಳಿತವರ್ಗಕ್ಕೆ ಆದೇಶವನ್ನು ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಕಂಪನಿಯ ಬಗ್ಗೆ ಒಂದು ನಿಲುವನ್ನು ನಾನು ಇತ್ತೀಚಿನ ಬಜೆಟ್ - ಭಾಷಣದಲ್ಲಿ ಹೇಳಿದಾಗ, ಆದರ ಹಿನ್ನೆಲೆಯನ್ನು ಹೇಳತಕ್ಕ ಅವಶ್ಯಕತೆ ಇದೆ ಎಂದು ನಾನು ಭಾವಿಸಿದ್ದೇನೆ. ಈ ರೀತಿಯ ಅನೇಕ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗಳು ಇವೆ. ಬಹಳ ವರ್ಷಗಳಿಂದ ನಷ್ಟದಲ್ಲಿವೆ. ಸುಮಾರು 40-50 ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿರುವಂತಹ ಮೈಸೂರು ಸೋಪ್ಸ್ ಅಂಡ್ ಡಿಟರ್‌ಜೆಂಟ್‌ಗೆ ಇದು ಸಂಬಂಧಪಟ್ಟಿದ್ದು. ಇತ್ತೀಚಿನ ನಮ್ಮ ನೀತಿಗೆ ಅನುಸಾರವಾಗಿ ಯಾವುದನ್ನು ನಾವು ನಮ್ಮ ಕೈಯಿಂದ ತಪ್ಪಿಸಿಕೊಳ್ಳಬೇಕು. ಟ್ಯಾಕ್ಸ್ ಪೇಯರ್ಸ್ ಹಣ ಹಾಳಾಗದ ಹಾಗೆ ನೋಡಿಕೊಳ್ಳಬೇಕು ಅನ್ನತಕ್ಕದ್ದು Suppose we decide to dis-invest our shares in all those Companies, I have already given a clue in my budget speech also. ಅದರ ಬಗ್ಗೆ ನಾನು

ತಿಳಿಸಿದ್ದೇನೆ. ಅದಕ್ಕೆ ಅನುಗುಣವಾಗಿ ಮಾಡುತ್ತೇವೆ. ಇಲ್ಲಿ ಕೆಲವು ರಿಹ್ಯಾಬಿಲಿಟೇಷನ್ ಪ್ರೋಗ್ರಾಂ ಅನ್ನು ಕೂಡ ರೆಡಿ ಮಾಡಿರತಕ್ಕ ವರದಿಯು ಸರ್ಕಾರದ ಮುಂದೆ ಇದೆ. ಇದು ಹೇಗೆ ಆಯಿತು. ನಷ್ಟ ಹೇಗಾಯಿತು ಎಂದು ವಿಚಾರಣೆ ಮಾಡಿದ ವರದಿಬೇರೆ ಇದೆ. ಅದನ್ನು ಬಹಳ ಅಮೂಲಾಗ್ರವಾಗಿ ವಿಚಾರ ಮಾಡತಕ್ಕದ್ದು ಇದೆ. ರಿಹ್ಯಾಬಿಲಿಟೇಷನ್ ಪ್ರೋಗ್ರಾಂ ಬಗ್ಗೆ ಕೂಡ ವಿಚಾರ ಮಾಡಿ ತಿಳಿಸಿದ್ದಾರೆ. ರಿಹ್ಯಾಬಿಲೆಚ್ ಮಾಡಬೇಕು. ಅಂದರೆ ವಿರೋಧ ಪಕ್ಷದವರು ಒಪ್ಪುತ್ತಾರೆಂದು ಭಾವಿಸಿದ್ದೇವೆ. Again Government will have to stand guarntee. ಅಥವಾ ಹಣ ತೆಗೆದುಕೊಂಡು ಹೋಗಿ ಅದಕ್ಕೆತುಂಬ ತಕ್ಕಂತಾದ್ದು.

ಇದು ನೆವರ್ ಎಂಡಿಂಗ್ ಬಿಜಿನೆಸ್ ಅಂತ ಒಂದು ಅಭಿಪ್ರಾಯ ಎಷ್ಟೇ ವಿಚಾರ ಮಾಡಿದ್ದೇವೆ. ಅದಕ್ಕಾಗಿ ಒಂದು ತಜ್ಞರ ಸಮೀತಿಯನ್ನು ನೇಮಕ ಮಾಡಿ ಯಾವ್ಯಾವ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಇದ್ದಾವೆ. ಅಂದರೆ ಸರ್ಕಾರಿ ಸ್ವಾಮ್ಯದಲ್ಲಿರತಕ್ಕ ಇಂತಹ ಕಂಪನಿಗಳು ಇದ್ದಾವೆ. ಅದರಿಂದ ನಾವು ಎಷ್ಟರಮಟ್ಟಿಗೆ ದೂರ ಸರಿಯಬಹುದು. ಅಂದರೆ ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರ ಹಿತವನ್ನು ಕಡೆಗಣಿಸಲಿಲ್ಲ. ಅದನ್ನು ಸ್ಥಿರೀಕರಿಸಿ ಅದಕ್ಕೆ ಬೆಂಬಲ ಮತ್ತು ಒತ್ತುಕೊಟ್ಟು ಹೇಗೆ ಮಾಡಬೇಕು ಎನ್ನುವ ತೀರ್ಮಾನ ನಾವು ಮಾಡುತ್ತೇವೆ. ಆ ಪಟ್ಟಿಯಲ್ಲಿ ಇದೂ ಕೂಡ ಇದೆ. ನಾವು ಅಂತಿಮವಾಗಿ ತೀರ್ಮಾನ ಮಾಡುತ್ತೇವೆಂಬ ವಿಚಾರ ಮಾತ್ರ ಹೇಳುತ್ತೇನೆ. ರೀಹ್ಯಾಬಿಲೇಟೀಶನ್ ಪ್ರೋಗ್ರಾಂ ಮತ್ತೊಂದಕ್ಕೆ ಹೋಗಿ ಹೋಗಿ ನೂರಾರು ಕೋಟಿ ರೂಪಾಯಿಗಳನ್ನು ಅದಕ್ಕೆ ತುಂಬತಕ್ಕದ್ದು ಇಲ್ಲವೇ ಗ್ಯಾರಂಟಿ ನಿಲ್ಲತಕ್ಕದ್ದು ಅಷ್ಟು ಒಳ್ಳೆಯದಲ್ಲವೆಂಬ ಅಭಿಪ್ರಾಯವನ್ನು ಸರ್ಕಾರ ಹೊಂದಿದೆ.

2. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ ಅಪ್ರೆಂಟೀಸ್ ಪಡೆದವರಿಗೆ ನೇಮಕ ಮಾಡಿಕೊಳ್ಳುವುದು.

ಶ್ರೀ ಎಸ್. ಇಸಾಮಿಯ (ಭದ್ರಾವತಿ) : ಮಾನ್ಯ ಅಧ್ಯಕ್ಷರೇ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ 1979ರಿಂದ ಕೇಂದ್ರ ಸರ್ಕಾರದ ಅನ್ನೆಯ ನ್ಯಾಷನಲ್ ಅಪ್ರೆಂಟೀಸಿಷಿಪ್ ಟ್ರೈನಿಂಗ್ ಸ್ಕೀಂ (ಎನ್‌ಎಟಿಎಸ್)ನಲ್ಲಿ ತರಬೇತಿ ಪಡೆದು ವಿಐಎಸ್‌ಎಲ್ ಆಡಳಿತ ವರ್ಗವು ಖಾಲಿಯಿರುವ ಹುದ್ದೆಗಳನ್ನು ತರಬೇತಿ ಪಡೆದವರಿಗೆ ಕೊಡದೆ ಪ್ರತಿ ಕೆಲಸಕ್ಕೂ ಹೊರ ರಾಜ್ಯದವರಿಗೆ ಕಂಟ್ರಾಕ್ಟ್ ಕೊಡುತ್ತಿದ್ದು, ಹೊರ ರಾಜ್ಯದವರನ್ನು ನೇಮಕ ಮಾಡಿಕೊಳ್ಳುತ್ತಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಮೇಲ್ಕಂಡ ವಿಷಯದ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೀರೋ ಅಥವಾ ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಒತ್ತಡ ತರುತ್ತೀರೋ ಎಂಬುವುದರ ಬಗ್ಗೆ ದಯವಿಟ್ಟು ತಿಳಿಸಲು ಕೋರುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಾಕ್ಷಿಣೆಯವರೇ, ಯಾರಿಗಾದರೂ ಅರ್ಥವಾಯಿತೆ ಇದು? ಬೊಲೋಜಿ ಉರ್ದುಮೆ ಅಜೇಜ್ ಸೇಲ್‌ರವರು ಕನ್ನಡ ಮತ್ತು ಇದು ಬಹಳ ಇಂಪ್ರೂವ್ಡ್ ವೆರೈಟಿ. ಮಾನ್ಯ ಸಭಾಧ್ಯಕ್ಷಿಣೆಯವರೆ ಮಾನ್ಯ ಸದಸ್ಯರು ಕೇಳಿರುವಂಥ ವಿಚಾರಕ್ಕೆ ನನ್ನ ಹೇಳಿಕೆ ಈ ರೀತಿಯಾಗಿದೆ. ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಸರ್ಕಾರಿ ಆದೇಶ ಕ್ರಮಾಂಕ ಸಿಐ46 ಸಿಐಎಸ್ 80ಪಿ ದಿನಾಂಕ 9-8-89ರ ಪ್ರಕಾರ ಕೇಂದ್ರ ಸರ್ಕಾರದ ಆಡಳಿತ ವ್ಯಾಪ್ತಿಯಲ್ಲಿ ಬರುವ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಸಂಸ್ಥೆಗೆ ವಹಿಸಲಾಗಿದೆ. ಅಂದಿನಿಂದ ಈ ಕಂಪನಿಯು ಈಗ ರಾಜ್ಯ ಸರ್ಕಾರದ ಆಡಳಿತ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿಲ್ಲ. ಸದರಿ ಕಂಪನಿಯು ಖಾಲಿ ಹುದ್ದೆಗಳನ್ನು ತರಬೇತಿ ಪಡೆದವರಿಗೆ ಕೂಡದೆ ಹೊರ ರಾಜ್ಯಗಳವರಿಗೆ ಕಂಟ್ರಾಕ್ಟ್ ಕೊಡುತ್ತಿದ್ದು ಹಾಗೂ ಹೊರ ರಾಜ್ಯಗಳವರನ್ನು ನೇಮಕ ಮಾಡಿ ಕೊಳ್ಳುತ್ತಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಇದುವರೆಗೂ ಬಂದಿರುವುದಿಲ್ಲ. ಆದಕಾರಣ, ಸದರಿ ವಿಷಯದ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಗಮನಕ್ಕೆ ತರುವ ವಿಷಯ